# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಹಣಕಾಸು ವಿಭಾಗ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

=====================================================================

ಸಂಖ್ಯೆ: ಕುವಿ:ಆರ್ಥಿಕ-15: 1999 :2018-19 ದಿನಾಂಕ: 24-09-2018 25

## ಸುತ್ತೋಲೆ

ವಿಷಯ: 2018-19ನೇ ಆರ್ಥಿಕ ಸಾಲಿನ ಆದಾಯ ತೆರಿಗೆಗೆ ಸಂಬಂಧಿಸಿದ **ಲೆಕ್ಕಾಚಾರ ತಃಖ್ತೆಯನ್ನು** ಸಲ್ಲಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಆದಾಯ ತೆರಿಗೆ ನಿರ್ದೇಶನಾಲಯ, ನವದೆಹಲಿ, ಇವರ ಪತ್ರ ಸಂಖ್ಯೆ: ಆ.ತೆ./008 ಬಿ.ಎಲ್.ಆರ್: 2/0927, ದಿನಾಂಕ: 12-02-2007.

--***--

ಕುವೆಂಪು ವಿಶ್ವವಿದ್ಯಾನಿಲಯ, ಅದರ ಘಟಕ ಕಾಲೇಜುಗಳಲ್ಲಿ ಮತ್ತು ನೇರ ಆಡಳಿತಕ್ಕೆ ಒಳಪಟ್ಟ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಆದಾಯ ತೆರಿಗೆಗೆ ಒಳಪಡುವಂತಹ ಅಧ್ಯಾಪಕ/ಅಧ್ಯಾಪಕೇತರ ಸಿಬ್ಬಂದಿ ವರ್ಗದವರು, 2018-19ನೇ ಆರ್ಥಿಕ ಸಾಲಿಗೆ **ಮುಂಗಡ ಆದಾಯ ತೆರಿಗೆ ಲೆಕ್ಕಾಚಾರದ ತಃಖ್ತೆಯನ್ನು**, ನಿಗದಿತ ನಮೂನೆಯಲ್ಲಿ, ವೇತನದಲ್ಲಿ ಉಳಿತಾಯ ಮಾಡುತ್ತಿರುವ ಮಾಹಿತಿಯನ್ನು ಹೊರತುಪಡಿಸಿ ಸ್ವಂತಕ್ಕೆ ತೊಡಗಿಸಿರುವ ಉಳಿತಾಯದ ಸಂಪೂರ್ಣ ವಿವರಗಳೊಂದಿಗೆ ದಿನಾಂಕ: **20ನೇ ಅಕ್ಟೋಬರ್ 2018** ರೊಳಗಾಗಿ ಹಣಕಾಸು ವಿಭಾಗಕ್ಕೆ ಪರಿಶೀಲನೆಗಾಗಿ ಹಾಗೂ ಫೆಬ್ರವರಿ ಮಾಹೆಯ ವೇತನದಲ್ಲಿ ಅಂತಿಮ ಆದಾಯ ತೆರಿಗೆಯನ್ನು ಕಟಾವಣೆಗೊಳಿಸಿ ವೇತನ ಪಾವತಿಸಲು ಅನುಕೂಲವಾಗುವಂತೆ ತುರ್ತಾಗಿ ಸಲ್ಲಿಸುವಂತೆ ಕೋರಲಾಗಿದೆ. ನಿಗದಿತ ನಮೂನೆಯನ್ನು ತಮ್ಮ ಕಛೇರಿ / ವಿಭಾಗಗಳಲ್ಲಿಯೇ www.kuvempu.ac.in ವೆಬ್‌ಸೈಟ್ ಮೂಲಕ ಎಕ್ಸೆಲ್-ರೆಡಿ-ಶೀಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಮಾಹಿತಿ ಸಲ್ಲಿಸುವುದು.

1. ಉಳಿತಾಯದ ಬಗ್ಗೆ 80ಸಿ ಅಡಿಯಲ್ಲಿ ತೊಡಗಿಸುವ ಮೊತ್ತಕ್ಕೆ ಸಂಬಂಧಿಸಿರುವ ದಾಖಲೆಯ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
2. ಆದಾಯ ತೆರಿಗೆ ಲೆಕ್ಕಾಚಾರದ ತಃಖ್ತೆಯನ್ನು ಸಲ್ಲಿಸುವಾಗ ಎಲ್ಲಾ ಉಳಿತಾಯಕ್ಕೆ ಸಂಬಂಧಿಸಿದ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

2

3. ಮನೆ ಬಾಡಿಗೆ ರಿಯಾಯಿತಿ ಪಡೆಯಲು ಬಯಸುವ ಅಧಿಕಾರಿಗಳು ತಾವು ಪಾವತಿಸುತ್ತಿರುವ ಮನೆ ಬಾಡಿಗೆ ಮೊತ್ತಕ್ಕೆ ಮನೆ ಮಾಲೀಕರಿಂದ ಪಡೆದ ರಶೀದಿ/ಸ್ವೀಕೃತಿಯನ್ನು ಜುಲೈ-2018 ಮತ್ತು ಜನವರಿ-2019ಕ್ಕೆ ಎರಡೂ ಮಾಹೆಗಳಿಗೆ ಸಂಬಂಧಿಸಿದಂತೆ ಲಗತ್ತಿಸಬೇಕು. ರಶೀದಿ/ಸ್ವೀಕೃತಿಯಲ್ಲಿ ಮನೆ ಮಾಲೀಕರ ಪೂರ್ಣ ವಿಳಾಸ ಮತ್ತು ಮಾಲೀಕರ ಪಾನ್ ಸಂಖ್ಯೆ ಇರತಕ್ಕದ್ದು.

4. ವಿವಿಧ ಖಾಸಗಿ ಸಂಸ್ಥೆಗಳಿಗೆ ಡೊನೇಷನ್(ವಂತಿಕೆ)ಗಳನ್ನು ಪಾವತಿಸಿ ಈ ಬಗ್ಗೆ ಆದಾಯ ತೆರಿಗೆ ವಿನಾಯಿತಿಯನ್ನು ಅಪೇಕ್ಷಿಸುವ ಅಧಿಕಾರಿ / ಸಿಬ್ಬಂದಿಯವರು ಸಂಬಂಧಪಟ್ಟ ಸಂಸ್ಥೆಯಿಂದ ಪಡೆದ ರಶೀದಿಯಲ್ಲಿ ಆದಾಯ ತೆರಿಗೆ ವಿನಾಯಿತಿ/ ರಿಯಾಯಿತಿಗೆ ಒಳಪಡುವುದೆಂಬ ಬಗ್ಗೆ ದೃಢೀಕರಣ ನಮೂದಿಸಿದ್ದಲ್ಲಿ ಮಾತ್ರ ಆದಾಯ ತೆರಿಗೆ ವಿನಾಯಿತಿಗೆ ಪರಿಗಣಿಸಲಾಗುವುದು.

5. ಮನೆ ನಿರ್ಮಾಣ ಖರೀದಿಗಳ ಬಗ್ಗೆ ಅಸಲು ಮರುಪಾವತಿ ಕಂತುಗಳ ಮೊತ್ತ, ಬಡ್ಡಿ ಮರುಪಾವತಿ ಕಂತುಗಳ ಮೊತ್ತ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ವಂತಿಕೆ ಕಂತುಗಳ ಮೊತ್ತವನ್ನು ಪಾವತಿಸಿದ ಬಗ್ಗೆ ಆದಾಯ ತೆರಿಗೆ ವಿನಾಯಿತಿ ಪಡೆಯ ಬಯಸುವವರು ಈ ಸಂಬಂಧ ಸೆಕ್ಷನ್‌ಗಳಲ್ಲಿ ನಿಗಧಿಪಡಿಸಿರುವ ಗರಿಷ್ಠ ಮಿತಿಗಳನ್ನು ಗಮನಿಸುವುದು ಹಾಗೂ ಈ ಸಂಬಂಧ ದಾಖಲಾತಿಗಳ ಪ್ರತಿಗಳನ್ನು ಲಗತ್ತಿಸತಕ್ಕದ್ದು.

6. ಮನೆ ನಿರ್ಮಾಣ/ಖರೀದಿಗಳಿಗಾಗಿ ಸಾಲ ಮಂಜೂರಾತಿ ಪಡೆದು ಮನೆ ನಿರ್ಮಿಸಿ, ಸ್ವತಃ ವಾಸವಾಗಿರುವ ಬಗ್ಗೆ ಅಥವಾ ಬಾಡಿಗೆಗೆ ನೀಡಿರುವ ಬಗ್ಗೆ ದೃಢೀಕರಣ ಲಗತ್ತಿಸುವುದು. ಬಾಡಿಗೆಗೆ ನೀಡಿದಲ್ಲಿ ಬಾಡಿಗೆ ಮೊತ್ತವನ್ನು ನಮೂದಿಸಿ ದೃಢೀಕರಿಸಬೇಕು.

7. ನಿರ್ದೇಶಕರು, ಆದಾಯ ತೆರಿಗೆ ನಿರ್ದೇಶನಾಲಯ, ನವದೆಹಲಿ ಇವರು ಉಲ್ಲೇಖಿತ ಪತ್ರದನುಸಾರ ಆದಾಯ ತೆರಿಗೆ ವ್ಯಾಪ್ತಿಗೊಳಪಡುವ ಎಲ್ಲಾ ನೌಕರರು ವಿವರಗಳನ್ನು ಸಲ್ಲಿಸುವಾಗ ಆದಾಯ ತೆರಿಗೆ ಕಾಯಿದೆ ಸೆಕ್ಷನ್ 139(ಎ) (5ಬಿ)ಯ ಪ್ರಕಾರ PAN ನಂಬರ್ (PAN- Permanent Account Number) ನಮೂದಿಸುವುದು ಕಡ್ಡಾಯವಾಗಿರುತ್ತದೆ.

8. ಸಿಬ್ಬಂದಿಗಳು ಕಳೆದ ಸಾಲಿನಲ್ಲಿ (2017-18ನೇ ಆರ್ಥಿಕವರ್ಷ) ನೀಡಿರುವ ಲೆಕ್ಕಾಚಾರವನ್ನೇ ಅನುಸರಿಸಿ ಮಾರ್ಚಿ-2018 ರಿಂದ ಆದಾಯ ತೆರಿಗೆ ಕಟಾವಣೆ ಮಾಡಲಾಗುತ್ತಿದೆ. ಈ ಸುತ್ತೋಲೆಯಲ್ಲಿ ತಿಳಿಸಿರುವ ದಿನಾಂಕ:20-10-2018 ರೊಳಗೆ 2018-19ನೇ ಸಾಲಿನ ತೆರಿಗೆ ವಿನಾಯಿತಿಗೆ ಸಂಬಂಧಿಸಿರುವ ದಾಖಲಾತಿಗಳನ್ನು ಸಲ್ಲಿಸದೇ ಇದ್ದಲ್ಲಿ ಅಕ್ಟೋಬರ್-2018ರ ಮಾಹೆಯಿಂದ **ಹಳೆಯ ಲೆಕ್ಕಾಚಾರವನ್ನು ಪರಿಗಣನೆಗೆ ತೆಗೆದುಕೊಳ್ಳದೇ** ಆದಾಯ ತೆರಿಗೆ ಕಟಾವಣೆ ಮಾಡಲಾಗುವುದು.

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451
-3

<u>ಇವರಿಗೆ:</u> (ತಮ್ಮ ವಿಭಾಗದ ಸಿಬ್ಬಂದಿಗಳ ಗಮನಕ್ಕೆ ತರುವಂತೆ ಕೋರಿದೆ)

1. **ಆಪ್ತ ಸಹಾಯಕರು:-** ಮಾನ್ಯ ಕುಲಪತಿಗಳು, ಮಾನ್ಯ ಕುಲಸಚಿವರು, ಕುಲಸಚಿವ(ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
2. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
4. ನಿರ್ದೇಶಕರು, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ - **ಇ-ಮೇಲ್ ಮೂಲಕ ತಮಗೆ ಕಳುಹಿಸಿರುವ ಸಾಫ್ಟ್ ಪ್ರತಿಯನ್ನು ವಿ.ವಿ. ಜಾಲತಾಣದಲ್ಲಿ ಅಳವಡಿಸಲು ಕ್ರಮ ಕೈಗೊಂಡು, ಆ ಮೂಲಕ ಎಲ್ಲರಿಗೂ ಡೌನ್‌ಲೋಡ್ ಮಾಡಿಕೊಳ್ಳಲು ಸಹಕರಿಸುವಂತೆ ಕೋರಲಾಗಿದೆ. ಮತ್ತು ಕಳೆದ ವರ್ಷದ ಶೀಟ್‌ನ್ನು ತೆಗೆದು ಹಾಕಬೇಕೆಂದೂ ಕೋರಿದೆ.**
5. ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
6. ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
8. ನಿರ್ದೇಶಕರು, ಪ.ಜಾ/ಪ.ಪಂ/ಹಿಂ.ಅ.ಸಂ. – ಘಟಕಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
9. ನಿರ್ದೇಶಕರು, ಮಹಿಳಾ ಅಧ್ಯಯನ ಕೇಂದ್ರ,, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
10. ನಿರ್ದೇಶಕರು, ಡಾ.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
11. ಪ್ರಾಂಶುಪಾಲರು-ಸಹ್ಯಾದ್ರಿ ವಿಜ್ಞಾನ ಕಾಲೇಜು / ಸಹ್ಯಾದ್ರಿ ಕಲಾ / ತ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ ಮತ್ತು ಎಸ್.ಎಮ್.ಆರ್.ಪ್ರಥಮ ದರ್ಜೆ ಕಾಲೇಜು ಶಂಕರಘಟ್ಟ - ತಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕ/ಅಧ್ಯಾಪಕೇತರ ನೌಕರರ ಗಮನಕ್ಕೆ ತರುವಂತೆ ಕೋರಲಾಗಿದೆ.
12. ಎಲ್ಲಾ, ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ / ಶಿವಮೊಗ್ಗ / ಕಡೂರು - ತಮ್ಮ ವಿಭಾಗದ ಎಲ್ಲಾ ಅಧ್ಯಾಪಕರ / ಅಧ್ಯಾಪಕೇತರ ನೌಕರರ ಗಮನಕ್ಕೆ ತರುವಂತೆ ಕೋರಲಾಗಿದೆ.
13. ಕ್ಯೂರೇಟರ್, ಕೆಳದಿ ಸಂಶೋಧನಾ ಕೇಂದ್ರ, ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
14. ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ಕುವಿವಿ ನಗರ ಕಛೇರಿ, ಎಂ.ಆರ್.ಎಸ್. ಸರ್ಕಲ್, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.
15. ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ , ಕಡೂರು / ಚಿಕ್ಕಮಗಳೂರು.
16. ನಿರ್ದೇಶಕರು, ಕ್ರೀಡಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
17. ನಿರ್ದೇಶಕರು, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
18. ಎಲ್ಲಾ ಉಪಕುಲಸಚಿವರುಗಳಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ / ಶಿವಮೊಗ್ಗ, ಕಡೂರು -
19. ಎಲ್ಲಾ ಸಹಾಯಕ ಕುಲಸಚಿವರುಗಳಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ / ಶಿವಮೊಗ್ಗ, ಕಡೂರು
20. ಎಲ್ಲಾ ಅಧೀಕ್ಷಕರುಗಳಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ / ಶಿವಮೊಗ್ಗ, ಕಡೂರು
21. ಕಛೇರಿ ಪ್ರತಿ.